ಮಾಂಸವೇ ಆಗಬೇಕೆ? ಅಡವಿಯಲ್ಲಿರೋ ಹುಲ್ಲು, ರೈತರ ಹೊಲಗಳಲ್ಲಿ ಬೆಳೆದಿರೋ ಬೆಳೆ... ಹೀಗೆ ಬೇರೇನನ್ನಾದರೂ ತಿನ್ನಬಹುದಲ್ಲ?"

ಪುಣ್ಯಕೋಟಿಯ ಮಾತು ಮುಗ್ಧತೆಯದೋ, ಅರಿವಿಲ್ಲದ ಅಜ್ಞಾನದ್ದೋ, ಇಲ್ಲ, ಸಮಯಕ್ಕೊಂದು ಮಾತು ಹೇಳಿ ದಾಟಿಹೋಗುವ ವಾಕ್ಚಾತುರ್ಯದ್ದೋ ಏನೊಂದೂ ತಿಳಿಯದ ಹುಲಿಮರಿಯು, "ಅಂಥದ್ದನ್ನು ತಿನ್ನಲು ನನಗೆ ಸಾಧ್ಯವೆ? ಆ ನಿಮ್ಮ ದೇವರೆಂಬವನು ನನಗೆ ಕೊಟ್ಟಿರುವ ಈ ಹಲ್ಲುಗಳನ್ನು ನೋಡಮ್ಮಾ, ಈ ಹಲ್ಲಿನಿಂದ ಹುಲ್ಲನ್ನು ಕತ್ತರಿಸಲು ಸಾಧ್ಯವೆ? ಹಾಗೆಂದು ನಾನೇನೂ ಸುಮ್ಮನೆ ಬಿಟ್ಟಿಲ್ಲ. ಹಸಿವಿನ ಸಂಕಟ ತಾಳಲಾರದೆ ಒಂದಿಷ್ಟು ಹುಲ್ಲಿನ ಕಡ್ಡಿಗಳನ್ನು ಪ್ರಯಾಸದಿಂದ ಕತ್ತರಿಸಿ ತಿಂದೂಬಿಟ್ಟೆ. ಆದರೆ ಅಮ್ಮಾ, ಕ್ಷಣ ಹೊತ್ತಾಗಿರಲಿಲ್ಲ, ಒಳಗೆ ಹೋದದ್ದೆಲ್ಲ ವಾಂತಿಯಾಗಿ ರಕ್ತದ ಜೊತೆಗೇ ಹೊರಗೆ ಬಂದು, ಹಸಿವು ಇನ್ನೂ ಹೆಚ್ಚಾಯ್ತು" ಕಣ್ಣೀರು ಸುರಿಸುತ್ತ ತನ್ನಳಲಿನ ಕತೆಯನ್ನು ಹೇಳುತ್ತಲೇ ಇತ್ತು ಹುಲಿಮರಿ.

"ಎಲ್ಲಿಯಾದರೂ ಹುಡುಕಿ ಅನ್ನವನನ್ನು ತಿನ್ನಬಹುದಿತ್ತಲ್ಲ?" ಇದು ಸರಿಯಾದ ಸೂಚನೆಯೆಂದು ಪುಣ್ಯಕೋಟಿ ಒಂದಿಷ್ಟು ಹೆಮ್ಮೆ ಮತ್ತು ಧೈರ್ಯದಿಂದಲೇ ಹೇಳಿತು.

"ಅನ್ನವೆ? ಯಾರು ಕೊಡುತ್ತಾರೆ ಅಮ್ಮ ನನಗೆ ಅನ್ನವನ್ನು? ಅನ್ನ ಹುಡುಕಲು ಹೋದರೆ ನನ್ನ ಗತಿ ಏನಾಗಬಹುದು ಊಹಿಸಿದ್ದೀಯಾ? ಏನಾದರಾಗಲಿ ಎಂದು ನಾನು ಆ ಪ್ರಯತ್ನವನ್ನೂ ಮಾಡಿದೆ. ಅನ್ನದ ವಾಸನೆ ಹಿಡಿದು ಒಂದು ಗುಡಿಸಲಿನ ಹತ್ತಿರ ಹೋಗಬೇಕೆಂದು ಇನ್ನೇನು ಅದರ ಹತ್ತಿರ ಬರುತ್ತಿದ್ದೆ, ಎಲ್ಲಿದ್ದರೋ ನೋಡು, ಬಂದರು ನೂರಾರು ಜನ ಭರ್ಚಿ, ಬಡಿಗೆ, ಕೊಡಲಿ ಹಿಡಿದುಕೊಂಡು... ಅವರ ಕ್ರೌರ್ಯದ ಹೊಡೆತಗಳಿಂದ ಸಾಯದೆ ಉಳಿದದ್ದೇ ದೊಡ್ಡ ಪವಾಡ!"– ಹಸಿವು ಹಿಂಗಿಸಿಕೊಳ್ಳಲು ಮಾಡಿದ ಎಲ್ಲ ಪ್ರಯತ್ನಗಳ ವಿವರ ನೀಡಿದ ಹುಲಿಮರಿಯು ದಣಿವಿನಿಂದ ದಸ್ ದಸ್ ತೇಕುತ್ತ, "ಹೇಳು ಪುಣ್ಯಕೋಟಿ ಅಮ್ಮ ಬೇರೇನಾದರೂ ದಾರಿಯಿದೆಯೆ ನನ್ನ ಹಸಿವು ಹಿಂಗಿಸಲು?" ಎಂದು ಮತ್ತೆ ಆಗ್ರಹದ ಧ್ವನಿಯಲ್ಲಿ ಪ್ರಶ್ನಿಸತೊಡಗಿತು. ಇರದ ಉತ್ತರಗಳನ್ನು ಹುಡುಕಿ ತರುವುದಾದರೂ ಎಲ್ಲಿಂದ? ಮೌನವೊಂದೇ ಮಹಾಮಾರ್ಗವಾದಂತಿದ್ದ ಪುಣ್ಯಕೋಟಿಯು ಪಿಳಿ ಪಿಳಿ ಕಣ್ಣು ಬಿಡುತ್ತ ನಿಂತುಬಿಟ್ಟಿತು.

ಆದರೆ ಪುಣ್ಯಕೋಟಿಗೆ ಕೇಳಬೇಕಿದ್ದ ಹುಲಿಮರಿಯ ಪ್ರಶ್ನೆಗಳು ಇನ್ನೂ ಮುಗಿದಿರಲಿಲ್ಲ. ಚಂಡವ್ಯಾಘ್ರನೆಂದು ಹೆಸರಿದ್ದರೂ, ಹಸಿವಿನ ಹೊರತು ಇನ್ನಾವ ಹಿಂಸೆಯನ್ನೂ ಮಾಡದ ಮತ್ತು ನೀತಿ–ಧರ್ಮಗಳ ಅನುಪಾಲಕನಾಗಿದ್ದ ಹೆಬ್ಬುಲಿಯ ಮಗನಾಗಿದ್ದ ಅದರಲ್ಲೂ ತಾತ್ವಿಕ ವಿಚಾರಗಳು ರಕ್ತಗತವಾಗಿ ಬಂದಿದ್ದವು. ದೇವರು, ಧರ್ಮಗಳ ಹೆಸರಿನಲ್ಲಿ ಮನುಷ್ಯರು ನಿರ್ಮಿಸಿರುವ ಹಿಂಸೆ ಮತ್ತು ಪುಣ್ಯ–ಪಾಪಗಳನ್ನು ಕುರಿತಾದ ಹಲವಾರು ಪ್ರಶ್ನೆಗಳು ಅದನ್ನು ಕಾಡುತ್ತಿದ್ದವು. ಅದಕ್ಕೆಂದೇ ಮತ್ತದು ಮುಂದುವರೆಸಿತು ತನ್ನ ಪ್ರಶ್ನೆಗಳನ್ನು–

"ಅಲ್ಲ, ಪುಣ್ಯಕೋಟಿಯಮ್ಮಾ, ಜೀವವಿರುವ ಎಲ್ಲ ಪ್ರಾಣಿಗಳಿಗೂ ಹಸಿವೆಂಬುದು ಸಾಮಾನ್ಯವಲ್ಲವೆ?"

"ಹೌದು" ಗೋಣು ಅಲ್ಲಾಡಿಸಿತು ಪುಣ್ಯಕೋಟಿ.

"ಹಾಗಾದರೆ ಗೋವಿನ ಹಸಿವಿಗೂ, ಹುಲಿಯ ಹಸಿವಿಗೂ ವ್ಯತ್ಯಾಸವೇನಾದರೂ ಇದೆಯೆ?"

"ಇಲ್ಲ."

"ಹಸಿವು ಹಿಂಗಿಸಿಕೊಳ್ಳಲು ಗೋವು ಹುಲ್ಲು ತಿನ್ನಬೇಕು, ಹುಲಿ ಮಾಂಸ ತಿನ್ನಬೇಕು ಎಂದು ನಿರ್ಧರಿಸಿದವರು ಯಾರು?"

"ದೇವರು."